ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1189
ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	22-09-2021.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಪೂನಾ - ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-4ನ್ನು 2019-20, 2020-21ರ ಸಾಲಿನಲ್ಲಿ ಸಂಕೇಶ್ವರ, ನಿಪ್ಪಾಣಿ ಮಧ್ಯೆ ಹಿರಣ್ಯಕೇಶಿ ನದಿಗೆ ಕಟ್ಟಿರುವ ಸೇತುವೆ ಎರಡು ಬಾರಿ ಮುಳುಗಡೆಯಾದ - ಹಿನ್ನೆಲೆಯಲ್ಲಿ ಹಲವಾರು ದಿನಗಳ ಕಾಲ ರಸ್ತೆ ಸಂಪರ್ಕ ಕಡಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು-ಪೂನಾ ರಾಷ್ಟ್ರೀಯ ಹೆದ್ದಾರಿಯ ಸಂಕೇಶ್ವರ ನಿಪ್ಪಾಣಿ ಭಾಗದ ರಸ್ತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರ ವ್ಯಾಪ್ತಿಯಲ್ಲಿ ಬರುತ್ತಿದ್ದು, ಹಿರಣ್ಯಕೇಶಿ ನದಿಗೆ ಕಟ್ಟಿರುವ ಸೇತುವೆಯ ಮುಳುಗಡೆಯಿಂದ ರಸ್ತೆ ಸಂಪರ್ಕ ಕಡಿತಗೊಂಡಿರುವುದು ಗಮನಕ್ಕೆ ಬಂದಿದೆ ಎಂದು NHAI ರವರು ವರದಿಸಿರುತ್ತಾರೆ.
ಆ)	ನಿಪ್ಪಾಣಿ, ಕೊಲ್ಲಾಪುರ, ರಾಷ್ಟ್ರೀಯ ಹೆದ್ದಾರಿಯಲ್ಲಿನ ದೂದ್ ಗಂಗಾ ಮತ್ತು ವೇದ ಗಂಗಾ ನದಿಗಳ ಹತ್ತಿರ ನಿರ್ಮಿಸಿರುವ ಸೇತುವೆ ಅವೈಜ್ಞಾನಿಕ ವಾಗಿದ್ದು, ಮಳೆಗಾಲದ ಪ್ರವಾಹದ ಸಂದರ್ಭ ಸೇತುವೆಯ ಮೇಲೆ ನೀರು ಹರಿದು 15 ದಿನಗಳ ಕಾಲ ರಸ್ತೆ ಸಂಚಾರ ನಿಂತುಹೋಗಿರುವುದನ್ನು ಸರ್ಕಾರ ಗಮನಿಸಿದೆಯೇ;	ನಿಪ್ಪಾಣಿ-ಖಾನಾಪುರ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ದೂಧ್‌ಗಂಗಾ ಮತ್ತು ವೇದಗಂಗಾ ನದಿಗಳ ಬಳಿ ನಿರ್ಮಿಸಿರುವ ಸೇತುವೆಯಲ್ಲಿ ಮಳೆಗಾಲದಲ್ಲಿ ಭಾರಿ ಮಳೆಯಿಂದಾಗಿ ಉಂಟಾದ ಪ್ರವಾಹದಿಂದ ಸುಮಾರು 15 ದಿನಗಳ ಸಂಚಾರ ನಿಂತು ಹೋಗಿರುವುದನ್ನು ಗಮನಿಸಲಾಗಿದೆ. ಹಾಗೂ ಸಂಕೇಶ್ವರ-ನಿಪ್ಪಾಣಿ ರಾ.ಹೆ.48 ರಲ್ಲಿ ಈ ವರ್ಷ ಭಾರೀ ಮಳೆ ಮತ್ತು ಪ್ರವಾಹದಿಂದಾಗಿ ಜುಲೈ ತಿಂಗಳ 22 ರಿಂದ 26 ರವರೆಗೆ (4 ದಿನಗಳು) ಮಾತ್ರ ಸಂಚಾರ ಕಡಿತಗೊಂಡಿತ್ತು. ಈ ಸಂದರ್ಭವು ಸೇತುವೆ ಅವೈಜ್ಞಾನಿಕವಾಗಿರುವುದರಿಂದ ಉದ್ಭವಿಸಿರುವು ದಾಗಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ವರದಿಸಿರುತ್ತಾರೆ.
ಇ)	ಸದರಿ ಅವೈಜ್ಞಾನಿಕ ಸೇತುವೆಗಳನ್ನು ವೈಜ್ಞಾನಿಕವಾಗಿ ಪರಿವರ್ತಿಸಿ ಸಂಚಾರ ಸುಗಮಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ;	ಬೆಳಗಾವಿ-ಮಹಾರಾಷ್ಟ್ರ ಗಡಿಯವರೆಗಿನ 6 ಪಥದ ರಸ್ತೆ ಅಭಿವೃದ್ಧಿ ಯೋಜನೆಗಾಗಿ ಈಗಾಗಲೇ ಟೆಂಡರ್ ಕರೆಯಲಾಗಿದೆ. ಸೇತುವೆ ಮುಳುಗುವಿಕೆಯ ಸಮಸ್ಯೆಗಳನ್ನು ಈ ಡಿ.ಪಿ.ಆರ್. ನಲ್ಲಿ ಪರಿಗಣಿಸಲಾಗಿದ್ದು, 6 ಪಥದ ರಸ್ತೆ ನಿರ್ಮಾಣದ ನಂತರ ಸಮಸ್ಯೆ ಬಗೆಹರಿಯಲಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುತ್ತಾರೆ.

...2

ಈ)	ಇದ್ದರೆ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮ ಹಾಗೂ ಯಾವ ಕಾಲಮಿತಿಯಲ್ಲಿ ಇದನ್ನು ಪೂರ್ಣಗೊಳಿಸಲಾಗುವುದು?	ಈ ಸಂಬಂಧ 6 ಪಥಗಳಾಗಿ ಅಭಿವೃದ್ಧಿಪಡಿಸುವ ಸಮಯದಲ್ಲಿ ಈ ಸೇತುವೆಗಳಿಗೆ ಎತ್ತರವನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. ಈ ಯೋಜನೆಯನ್ನು 2023 ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು NHAI ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 239 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಇಲಾಖೆ